1-30 P. M.

Training in driving etc., for B. C. Candidates

123. SRI K. SIDDAIAH (Santhemarahalli).—

Will the Chief Minister be pleased to State.—

(a) whether Government have prepared schemes for training the B.C. Candidates in such trades/professions in which vacancies reserved for B.Cs. have lapsed for want of required qualified or trained candidates;

(b) if so. the scheme prepared by Governm nt for training of B C. candidates in driving and in heavy Motor driving, tvpewriting or shorthand etc?

SRI M. S. KRISHNA.—(Minister for Industries and Parliamentary Affairs) [on behalf of SRI D. DEVARAJ URS (Chief Minister).—]

(a) No.

(b) Does not arise in view of reply at (a) above.

ಶ್ರೀ ಕೆ ಸಿದ್ದಯ್ಯ—ವಾಹನಗಳನ್ನು ನಡೆಸುವ ಬಗ್ಗೆ ಟ್ರೈನಿಂಗ್ ಕೊಡುತ್ತೇವೆಂದು ಹಿಂದೆ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು ಈ ಸದನದಲ್ಲಿ ಹೇಳಿದ್ದರು, ಅದರ ಬಗ್ಗೆ ಮತ್ತೇನಾದರೂ ಟ್ರೈನಿಂಗ್ ಕೊಡುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆಯೇ?

ಶ್ರೀ ಎಸ್. ಎಂ. ಕೃಷ್ಣ.—ಟ್ರೈನಿಂಗ್ ಇನ್ ಹೆವಿ ಮೋಟಾರ್ ವೆಹಿಕಲ್ಸ್ ಡ್ರೈವಿಂಗ್ ಆಂಡ್ ಮೆಯಿಂಟೆನೆನ್ಸ್ ಎಂದು ಹೇಳಿ ಸ್ಪೆಷಲ್ ಎಂಪ್ಲಾಯಿಮೆಂಟ್ ಪ್ರೋಗ್ರಾಂ ೧೯೭೨-೭೩ ರಲ್ಲಿ ಜಾರಿಯಲ್ಲಿತ್ತು ಮತ್ತು ೧೯೭೩-೧೯೭೪ ರಲ್ಲಿ ಹಾಫ್ ಎ ಮಿಲಿಯನ್ ಜಾಬ್ ಪ್ರೋಗ್ರಾಂ ಎಂದು ಹೊಸ ಯೋಜನೆಯನ್ನು ಕೇಂದ್ರ ಸರ್ಕಾರದವರು ಇಂಟ್ರಡ್ಯೂಸ್ ಮಾಡಿಸಿದರು. ಈ ಎರಡು ಯೋಜನೆಗಳ ಪ್ರಕಾರ ಬಳ್ಳಾರಿ, ಬೆಂಗಳೂರು, ಕೋಲಾರ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸುಮಾರು ೧೬೯ ಜನಕ್ಕೆ ಟ್ರೈನಿಂಗನ್ನು ಕೊಟ್ಟಿದ್ದೇವೆ, ಅದರಲ್ಲಿ ೧೩೨ ಜನ ಬ್ಯಾಕ್‌ವರ್ಡ್ ಕ್ಲಾಸಿಗೆ ಸೇರಿದವರು.

ಶ್ರೀ ಕೆ. ಸಿದ್ದಯ್ಯ.—ನಾನು ಕೇಳುತ್ತಿರುವುದು ಹೆವಿ ಮೋಟಾರ್ ವೆಹಿಕಲ್ಸ್ ಡ್ರೈವಿಂಗ್‌ನಲ್ಲಿ ಬಸ್ಸುಗಳನ್ನು ಓಡಿಸತಕ್ಕ ಟ್ರೈನಿಂಗ್ ಕೊಡುತ್ತೀರಾ ಎಂದು. ಈ ಹಿಂದೆ ಸಮಾಜ ಕಲ್ಯಾಣ ಇಲಾಖೆಯವರು ಆಟೋರಿಕ್ಷಾಗಳನ್ನು ಓಡಿಸುವ ಟ್ರೈನಿಂಗ್ ಕೊಡುತ್ತೇವೆಂದು ಹೇಳಿದ್ದರು. ಒಂದು ವೇಳೆ ಹೆವಿ ವೆಹಿಕಲ್ಸ್ ಡ್ರೈವಿಂಗ್ ಬಗ್ಗೆ ಟ್ರೈನಿಂಗ್ ಕೊಡದಿದ್ದರೆ ಕೊಡುವುದಕ್ಕೆ ಏರ್ಪಾಡು ಮಾಡುತ್ತಿರಾ?

ಶ್ರೀ ಎಸ್. ಎಂ. ಕೃಷ್ಣ.—ಇದೂ ಅಲ್ಲದೆ ಕನ್ನಡ ಟೈಪಿಂಗ್ ಮತ್ತು ಶೀಘ್ರಲಿಪಿ ಅಭ್ಯರ್ಥಿಗಳಿಗೆ ಸ್ಪೆಷಲ್ ಎಂಪ್ಲಾಯಿಮೆಂಟ್ ಪ್ರೋಗಾಂನಲ್ಲಿ ಟ್ರೈನಿಂಗ್‌ಗಳನ್ನು ಕೊಡುತ್ತಿದ್ದೇವೆ. ನಾನು ಮೊದಲು ಹೇಳಿದ್ದು ಹೆವಿ ಮೋಟಾರ್ ಡ್ರೈವಿಂಗ್ ಮತ್ತು ಮೆಯಿಂಟೆನೆನ್ಸ್ ಬಗ್ಗೆ.

ಶ್ರೀ ಕೆ. ಸಿದ್ದಯ್ಯ.—ಎಲ್ಲೂ ಬಸ್ಸುಗಳನ್ನೂ ಓಡಿಸತಕ್ಕ ಟ್ರೈನಿಂಗನ್ನು ಕೊಡುತ್ತಿಲ್ಲ, ಅದರ ಬಗ್ಗೆ ಪ್ರಯತ್ನ ಮಾಡುತ್ತಿರಾ?

ಶ್ರೀ ಎಸ್. ಎಂ. ಕೃಷ್ಣ ಹೆವಿ ಮೋಟಾರ್ ವೆಹಿಕಲ್ಸ್ ಎಂದರೆ ಅದರಲ್ಲಿ ಬಸ್ಸು ಟ್ರಕ್ಕು ಎರಡೂ ಸೇರುತ್ತದೆ.

ಶ್ರೀ ಕೆ. ಸಿದ್ದಯ್ಯ.—ಬಸ್ಸುಗಳನ್ನು ಓಡಿಸುವುದಕ್ಕೆ ಟ್ರೈನಿಂಗ್ ಕೊಡುತ್ತಾ ಇಲ್ಲ, ಲಾರಿಗಳನ್ನು ಓಡಿಸುವುದಕ್ಕೆ ಇರಬಹುದು.

ಶ್ರೀ ಎಸ್.ಎಂ. ಕೃಷ್ಣ.—ಲಾರಿ ಡ್ರೈವ್ ಮಾಡುವ ಸಾಮರ್ಥ್ಯ ಇರುವವರು ಬಸ್ ಡ್ರೈವ್ ಮಾಡಬಹುದು.

ಶ್ರೀ ಎಂ.ಹೆಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ, ಎಸ್.ಸಿ. ಎಸ್.ಟಿ, ಮತ್ತು ಬಿ.ಸಿ. ವರ್ಗಗಳಿಗೆ ಸೇರಿದಂಥ ಅಭ್ಯರ್ಥಿಗಳಿಗೆ ಸರ್ಕಾರಿ ಉದ್ಯೋಗಗಳನ್ನು ಒದಗಿಸುವುದಕ್ಕೆ ಟ್ರೈನಿಂಗ್ ಇಲ್ಲ ವೆಂದು ಅವು ಅಪ್ಲೈ ಆಗುತ್ತಿವೆ. ಆದುದರಿಂದ ಆದ್ಯತೆಯನ್ನು ನೀಡಿ ಲೇಬರ್ ಡಿಪಾರ್ಟ್‌ಮೆಂಟಿಗೆ ವರಾಗಲೀ ಸಮಾಜ ಕಲ್ಯಾಣ ಇಲಾಖೆಯವರಾಗಲೀ ಡ್ರೈವರ್ಸ್ ಮತ್ತು ಟೈಪರೈಟಿಂಗ್‌ನಲ್ಲಿ ಕೊಟ್ಟು ಅವಕಾಶ ಕಲ್ಪಿಸಿಕೊಡುವ ಒಂದು ವಿಶೇಷ ಯೋಜನೆಯನ್ನು ಮಾಡಿ ಈ ವರ್ಗದ ಅಭ್ಯರ್ಥಿಗಳಿಗೆ ಉದ್ಯೋಗ ದೊರಕುವಂತೆ ಮಾಡುತ್ತಿರಾ ?

ಶ್ರೀ ಎಸ್.ಎಂ ಕೃಷ್ಣ.—ಈ ಬಗ್ಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ, ಈ ಎರಡು ಯೋಜನೆಗಳ ಪ್ರಕಾರ ೧೬೯ ಜನಕ್ಕೆ ಟ್ರೈನಿಂಗ್ ಕೊಟ್ಟಿದೆ.

ಬೆಂಡೆಕೆರೆ ಗ್ರಾಮದ ಬಳಿ ಬಿ.ಎಚ್. ರಸ್ತೆಯನ್ನು ಬದಲಾಯಿಸಿರುವುದು.

೧೬೨. ಶ್ರೀ ಅನಿವಾಲದ ನಂಜಪ್ಪ (ಅರಸೀಕೆರೆ)—

ಲೋಕೋಪಯೋಗಿ ಮಂತ್ರಿಗಳು ಈ ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

(ಅ) ಅರಸೀಕೆರೆ ತಾಲೂಕು ಬಾಣವರದ ಹೋಬಳಿ ಬೆಂಡೆಕೆರೆ ಗ್ರಾಮದ ಒಳಗಡೆ ಹೋಗುವ ಬಿ.ಎಚ್. ರಸ್ತೆಯನ್ನು ಬದಲಾಯಿಸಿ ಗ್ರಾಮದ ಹೊರಗಡೆ ಸದರಿ ರಸ್ತೆಯನ್ನು ಮಾಡಲು ಪ್ಲಾನು ಅಂದಾಜು ತಯಾರಾಗಿ ಮಂಜೂರಾಗಿರುತ್ತದೆಯೆ :

(ಆ) ಹಾಗಿದ್ದಲ್ಲಿ, ಮಂಜೂರಾಗಿ ಎಷ್ಟು ವರ್ಷಗಳಾದವು :

(ಇ) ಸದರಿ ರಸ್ತೆ ಇದುವರೆಗೆ ಆಗದೆ ಇರುವುದರಿಂದ ಆ ರಸ್ತೆಯಲ್ಲಿ ಸಂಭವಿಸುವ ಅಪಘಾತ ಗಳನ್ನು ತಪ್ಪಿಸಲು ಈಗಲಾದರೂ ಆ ರಸ್ತೆಯ ಕೆಲಸವನ್ನು ತಪ್ಪಿಸಲು ಈಗಲಾದರೂ ಆ ರಸ್ತೆಯ ಕೆಲಸ ವನ್ನು ತ್ವರಿತಗತಿಯಿಂದ ಪ್ರಾರಂಭಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ ?

ಶ್ರೀ ಎಚ್.ಎಂ. ಚನ್ನಬಸಪ್ಪ.—(ಲೋಕೋಪಯೋಗಿ ಮಂತ್ರಿಗಳು.)

ಉತ್ತರ—(ಅ) ಅಂದಾಜು ತಯಾರಿಸಲಾಗಿದೆ, ಮಂಜೂರಾತಿ ಕೊಟ್ಟಿಲ್ಲ

(ಆ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಇ) ಸರ್ಕಾರದ ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿ ಈ ವಿಷಯವನ್ನು ಪರಿಶೀಲಿಸ ಲಾಗುವುದು.

ಶ್ರೀ ಎ. ನಂಜಪ್ಪ.—ಸ್ವಾಮಿ, ರಸ್ತೆ ಅಂದಾಜು ತಯಾರಾಗಿದೆ ಎಂದು ಹೇಳಿದ್ದೀರಿ. ಅಂದಾಜು ತಯಾರಾಗಿ ಎಷ್ಟು ವರ್ಷವಾಯಿತು ?

† ಶ್ರೀ ಎಚ್.ಎಂ. ಚನ್ನಬಸಪ್ಪ.—ಮೊನ್ನೆ ತಾನೇ ಇಲ್ಲಿಂದ ಹೋಗಿ ಇನ್‌ಸ್ಪೆಕ್ಟ್ ಮಾಡಿ ಅಂದಾಜು ತಯಾರು ಮಾಡಿ ಎಂದು ಹೇಳಿದ ಮೇಲೆ ಮಾಡಿದ್ದಾರೆ.

ಶ್ರೀ ಎ. ನಂಜಪ್ಪ.—ರಸ್ತೆಯು ಹಳ್ಳಿಯ ಮಧ್ಯ ಭಾಗದಲ್ಲಿ ಹೋಗುತ್ತಿದೆ. ಅಲ್ಲಿ ನ್ಯಾರೋ ಕರ್ವ್ ಇರುವುದರಿಂದ ಶಾಲೆಗೆ ಹೋಗುವಕ್ಕ ಹೆಣ್ಣು ಮಕ್ಕಳು ಪ್ರಾಣಾರ್ಪಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಹೆಚ್.ಎಂ. ಚನ್ನಬಸಪ್ಪ.—ಕೆಲವು ವೇಳೆ ಹಾಗೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಅನಿವಾಲದ ನಂಜಪ್ಪ.—ಈ ರೀತಿ ಪ್ರತಿನಿತ್ಯ ಆಗುತ್ತಾ ಇದ್ದರೂ ಸಹ ನಿಧಾನ ಮಾಡುವುದಕ್ಕೆ ಹಣದ ಕೊರತೆಯೆಂದು ಹೇಳುತ್ತೀರಿ. ಈಗಲಾದರೂ ಈ ಕೆಲಸವನ್ನು ಜಾಗ್ರತೆ ಮಾಡಿಸಿಕೊಡುತ್ತೀರಾ?

ಶ್ರೀ ಹೆಚ್.ಎಂ. ಚನ್ನಬಸಪ್ಪ.—ರಸ್ತೆಯನ್ನು ಒತ್ತುವರಿ ದಾಖಲಿಕೊಂಡಿರುವುದು ಇದಕ್ಕೆ ಒಂದು ಕಾರಣ, ಒತ್ತುವರಿ ತೆಗೆಸುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಮುಂದೆ ಹಣ ಒದಗಿದ ಕಾಲದಲ್ಲಿ ರಸ್ತೆ ಬೈಪಾಸ್ ಮಾಡುವುದಕ್ಕೆ ಯೋಚನೆ ಮಾಡುತ್ತೇನೆ.